

ಆಪ್ತೇಷ್ಟರ ಬಳಿ ಹಂಚಿಕೊಳ್ಳುವ ಗೋಪ್ಯ ಮಾಹಿತಿ, ಪ್ರಿಯತಮ/ಪ್ರಿಯತಮೆಯ ಜತೆಗಿನ ಅಕ್ಷರ ಲಲ್ಲೆ, ಚಳವಳಿಯ ಗೊತ್ತುವಳಿಗಳು, ಕಚೇರಿಯ ಕಾರ್ಯಸೂಚಿ... ಹೀಗೆ ಏನೆಲ್ಲ, ಎಷ್ಟೆಲ್ಲ. ಇವುಗಳನ್ನು ಅದೆಷ್ಟೋ ಕಂಪನಿಗಳು ಕದಿಯುವುದು ಗೊತ್ತೇ ಇದೆ. ಹ್ಯಾಕಿಂಗ್, ಮಾಹಿತಿ ಸೋರಿಕೆಯ ಅರಿವೂ ಆಧುನಿಕ ಗ್ರಾಹಕರಿಗೆ ಇದೆ. ಆದರೆ, ಇದರಿಂದಲೇ ಅನುಮಾನದ ದೊಡ್ಡ ವ್ಯಾಧಿಯೊಂದು ನಗರ ನಾಗರಿಕರನ್ನು ಅತಿಯಾಗಿ ಆವರಿಸಿಕೊಂಡಿರುವುದು ಗಮನಾರ್ಹ. ಸಂಬಂಧಗಳ ಸಿಕ್ಕುಗಳು, ಮದುವೆಗೆ ಗೊತ್ತಾದ ವರ ಅಥವಾ ವಧುವಿನ ಚಾರಿತ್ರ್ಯ ಕುರಿತ ಗುಮಾನಿ, ವಿವಾಹೇತರ ಸಂಬಂಧಗಳ ಅನುಮಾನ, ಕಚೇರಿಯ ಮಹತ್ವದ ಮಾಹಿತಿಯನ್ನು ಪ್ರತಿಸ್ಪರ್ಧಿ ಕಂಪನಿಗೆ ಸಿಬ್ಬಂದಿ ದಾಟಿಸುತ್ತಿರಬಹುದೇ ಎಂಬ ಸಂಶಯ ಇವೆಲ್ಲಕ್ಕೂ ಸಂಪರ್ಕ ಕ್ರಾಂತಿಗೂ ಸಾವಯವ ಸಂಬಂಧವಿದೆ.

## ಕಾರ್ಪೊರೇಟ್ ಆಟ

2010ರ ಪ್ರಾರಂಭದಲ್ಲಿ ಮಹೀಂದ್ರ ಎಸ್‌ಎಸ್‌ಜಿ ಒಂದು ಆಸಕ್ತಿಕರವಾದ ಕಾರ್ಯಕ್ಕೆ ಮುಂದಾಗಿತ್ತು. 40ಕ್ಕೂ ಹೆಚ್ಚು ಕಂಪನಿಗಳ ಮಾನವ ಸಂಪನ್ಮೂಲ ವಿಭಾಗಗಳನ್ನು ಆ ಕಾರ್ಯದಲ್ಲಿ ತೊಡಗಿಸಿಕೊಂಡಿತ್ತು. 2008–09ರಲ್ಲಿ ಕಾರ್ಪೊರೇಟ್ ಕಂಪನಿಗಳು ಸಂಕಷ್ಟದಲ್ಲಿದ್ದವು. ಆಗ ಒಂದು ಕಂಪನಿಯಿಂದ ಇನ್ನೊಂದಕ್ಕೆ ಕೆಲಸ ಬದಲಿಸಿದ್ದ ಶೇ 65ರಷ್ಟು ನೌಕರರು ಎರಡೇ ವರ್ಷಗಳಲ್ಲಿ ತಂತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರು. ಯಾವ ಕಂಪನಿಯಿಂದ ಹಿಂದೆ ಕೆಲಸ ಬಿಟ್ಟು ಬಂದಿದ್ದರೋ ಆ ಸಂಸ್ಥೆಗೇ ಮರಳಿ ಸೇರಿದವರ ಸಂಖ್ಯೆ ಶೇ 80ರಷ್ಟಿತ್ತು. ಇದು ಆಯಾ ಕಂಪನಿಗಳ ವ್ಯಾವಹಾರಿಕ ತಂತ್ರವಾಗಿತ್ತು. ಪ್ರತಿಸ್ಪರ್ಧಿ ಕಂಪನಿಗೆ ಕೆಲಸಕ್ಕೆ ಸೇರಿಕೊಳ್ಳುವಂತೆ ಪುಸಲಾಯಿಸಿ, ಆಮೇಲೆ ಅಲ್ಲಿನ ಕಾರ್ಯತಂತ್ರ ಅರಿಯುವ ಜಾಣತನವಿದು. ಈ ಸತ್ಯವನ್ನು ಕಂಡು–ಕೇಳಿದ ಮಹೀಂದ್ರಾ ಎಸ್‌ಎಸ್‌ಜಿ ಕಂಪನಿಯ ದಿನೇಶ್ ಪಿಳ್ಳೈ ಚಕಿತರಾಗಿದ್ದರು. ಅನೇಕ ಕಂಪನಿಗಳು ಈ ತಂತ್ರ ತಪ್ಪು ಎಂದೇನೂ ಭಾವಿಸಿರಲಿಲ್ಲ. ಔಷಧ ತಯಾರಿಸುವ ಕಂಪನಿಯ ಶೇ 30ರಷ್ಟು ಸಂಶೋಧಕರು ಪ್ರತಿಸ್ಪರ್ಧಿ ಸಂಸ್ಥೆಗೆ ಸೇರಿ, ಮೊದಲಿದ್ದ ಕಡೆಯ ರಹಸ್ಯವನ್ನು ಸೋರಿಕೆ ಮಾಡಿದ್ದೂ ಈ ಕಾರ್ಯದಲ್ಲಿ ಸ್ಪಷ್ಟವಾಗಿತ್ತು.

ಅನುಮಾನದ ದೊಡ್ಡ ವ್ಯಾಧಿಯೊಂದು ನಗರ ನಾಗರಿಕರನ್ನು ಅತಿಯಾಗಿ ಆವರಿಸಿಕೊಂಡಿರುವುದು ಗಮನಾರ್ಹ. ಸಂಬಂಧಗಳ ಸಿಕ್ಕುಗಳು, ಮದುವೆಗೆ ಗೊತ್ತಾದ ವರ ಅಥವಾ ವಧುವಿನ ಚಾರಿತ್ರ್ಯ ಕುರಿತ ಗುಮಾನಿ, ವಿವಾಹೇತರ ಸಂಬಂಧಗಳ ಅನುಮಾನ, ಕಚೇರಿಯ ಮಹತ್ವದ ಮಾಹಿತಿಯನ್ನು ಪ್ರತಿಸ್ಪರ್ಧಿ ಕಂಪನಿಗೆ ಸಿಬ್ಬಂದಿ ದಾಟಿಸುತ್ತಿರಬಹುದೇ ಎಂಬ ಸಂಶಯ ಇವೆಲ್ಲಕ್ಕೂ ಸಂಪರ್ಕ ಕ್ರಾಂತಿಗೂ ಸಾವಯವ ಸಂಬಂಧವಿದೆ.